**ಸಿ.ಸಿ. ನಂಃ 977/2023 ಪಿ.ಡಬ್ಲ್ಯೂ- 1**

**ದಿನಾಂಕಃ 08.12.2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಮಾಡಿಸಲಾಯಿತು.**

**ಪಾಟೀಸವಾಲುಃ ಆರೋಪಿಯ ಪರ ಶ್ರೀ ಜಿ.ಎಸ್. ವಕೀಲರಿಂದಃ**

ಆರೋಪಿಗೂ ಹಾಗೂ ನಿಮಗೂ ಈ ವ್ಯವಹಾರ ಬಿಟ್ಟು ಬೇರೆ ವ್ಯವಹಾರ ಇದೆಯಾ ಎಂದರೆ ಇಲ್ಲ ಎನ್ನುತ್ತಾರೆ. ಸಾಕ್ಷಿ ಮುಂದುವರೆದು ಆರೋಪಿ ನಮ್ಮ ಹತ್ತಿರ ಬಂದು ಕೋಳಿ ಹಾಗೂ ಜೋಳ ತೆಗೆದುಕೊಂಡು ಹೋಗುತ್ತಿದ್ದರು ಎನ್ನುತ್ತಾರೆ. ಸದರಿ ವ್ಯವಹಾರಕ್ಕೆ ರಸೀದಿ ಕೊಡುತ್ತಿದ್ದಿರಾ ಎಂದರೆ ಇಲ್ಲ ಎನ್ನುತ್ತಾರೆ. ಎಷ್ಟು ವರ್ಷದಿಂದ ತೆಗೆದುಕೊಂಡು ಹೋಗುತ್ತಿದ್ದರು ಎಂದರೆ 20 ವರ್ಷದಿಂದ ಎನ್ನುತ್ತಾರೆ. ಹಾಗಾದರೆ ನೀವು ಆರೋಪಿಯ ಹತ್ತಿರ 18 ವರ್ಷಗಳಿಂದ ವ್ಯವಹಾರ ಮಾಡಿದ್ದಿರಿ ಎಂದರೆ ಹೌದು. ಬ್ಯಾಂಕ್ ಖಾತೆ ಮುಖಾಂತರ ನೀವು ಹಣ ವರ್ಗಾವಣೆ ನೀವು ಮತ್ತು ಆರೋಪಿ ಮಾಡಿಕೊಂಡಿರುತ್ತೀರಾ ಎಂದರೆ ಮಾಡಿಕೊಂಡಿರುತ್ತೆವೆ ಎನ್ನುತ್ತಾರೆ. 2009 ರಿಂದ ಆರೋಪಿ ಖಾತೆಯಿಂದ ನಿಮ್ಮ ಖಾತೆಗೆ ಹಣ ವರ್ಗಾವಣೆ ಮಾಡಿರುತ್ತಾರೆ ಎಂದರೆ ಸಾಕ್ಷಿ ಆರೋಪಿ ಕೋಳಿ ಮತ್ತು ಜೋಳ ಪಡೆದುಕೊಂಡಿದ್ದರು ಅದಕ್ಕಾಗಿ ಮಾಡಿರುತ್ತಾರೆ ಎನ್ನುತ್ತಾರೆ. ಚೆಕ್ ಹಾಕಿದ ನಂತರವೂ ನಿಮ್ಮ ಖಾತೆಗೆ ಆರೋಪಿ ಖಾತೆಯಿಂದ ಹಣ ಜಮಾ ಆಗಿರುತ್ತದೆ ಎಂದರೆ ನೆನಪಿಲ್ಲ ಎನ್ನುತ್ತಾರೆ. ನೀವು ಆರೋಪಿ ಖಾತೆಗೆ ಹಣ ಹಾಕಿರುವ ಬಗ್ಗೆ ದಾಖಲಾತಿ ಕೊಟ್ಟಿರುತ್ತೀರಾ ಎಂದರೆ ಇಲ್ಲ ಎನ್ನುತ್ತಾರೆ. ಆರೋಪಿ ನಿಮ್ಮ ಹತ್ತಿರ ಪಡೆದುಕೊಂಡಿರುವ ಹಣವನ್ನು ವಾಪಸ್ಸು ಕೊಟ್ಟಿರುತ್ತಾರೆ ಆದರೆ ನೀವು ಅವರ ಚೆಕ್ ಪಡೆದುಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಅದೇ ರೀತಿ ಮೋಸದಿಂದ ಆರೋಪಿಯಿಂದ ಚೆಕ್

ಪಡೆದುಕೊಂಡಿರುತ್ತೀರಾ ಆದಕಾರಣ ಬ್ಯಾಂಕ್ ನಿಂದ ಸಿಗ್ನೇಚರ್ ಡಿಫರ್ ಎಂದು ಬಂದಿರುತ್ತದೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

**(ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಅನುಸಾರವಾಗಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಸಾ ಓ ಹೇ ಕೇ ಸ ಅದೆ.**

Sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.